ಕಿರುಚಿತ್ರ

# ವರ್ತಮಾನವಿಲ್ಲದ ಬದುಕು...



**ನಿಶಾಜಗತ್ತಲ್ಲಿ ಎಚ್ಚರವಿದ್ದು, ದಿನದ ಹೊತ್ತಲ್ಲಿ ನಿದ್ರೆಗೆ ಜಾರುವ ದೊಡ್ಡ ಸಮುದಾಯವೇ ಮಹಾನಗರಗಳಲ್ಲಿದೆ. ಜಗತ್ತಿನ ಗಡಿಯಾರಕ್ಕೆ ವಿರುದ್ಧವಾಗಿ ಜೀವನದ ಗಡಿಯಾರವನ್ನು ಕಟ್ಟಿಕೊಂಡು ಓಡುತ್ತಿರುವ ಅಂಥ ಜನರ ಮನಸ್ಥಿತಿಯನ್ನು ಇಟ್ಟುಕೊಂಡು ಕಟ್ಟಿದ ಸೈನ್ಸ್ ಥ್ರಿಲ್ಲರ್ ‘ಆ್ಯಪ್ಟಿಮಿಲೊ’.**

■ ಗೌರಿ

ಸೈನ್ಸ್ ಥ್ರಿಲ್ಲರ್ ಜಗತ್ತಿನ ಜನಪ್ರಿಯ ಸಿನಿಮಾ ಜಾನರ್‌ಗಳಲ್ಲಿ ಒಂದು. ಬಾಲಿವುಡ್ ಈ ಜಾನರ್‌ನಲ್ಲಿ ಮೈನವಿರೇಳಿಸುವ ಹಲವು ಸಾಹಸಗಳನ್ನು ಮಾಡಿಬಿಟ್ಟಿದೆ. ಹಾಗೆ ನೋಡಿದರೆ ಕನ್ನಡದಲ್ಲಿಯೇ ಈ ಪ್ರಕಾರದಲ್ಲಿ ಅಷ್ಟಾಗಿ ಸಿನಿಮಾ ಬಂದಿಲ್ಲ. ಬಂದಿರು ಕೆಲವು ಸಿನಿಮಾಗಳೂ ಹೇಳಿಕೊಳ್ಳುವಂಥ ಯಶಸ್ಸು ಕಾಣಲಿಲ್ಲ.

ಆಕಾಶ್ ಕೋಟೆಮನೆ ನಿರ್ದೇಶನದ ‘ಆ್ಯಪ್ಟಿಮಿಲೊ’ ಕನ್ನಡ ಕಿರುಚಿತ್ರ ಈ ಕಾರಣಕ್ಕಾಗಿಯೇ ಗಮನಸೆಳೆಯುತ್ತದೆ. ಸೈನ್ಸ್ ಥ್ರಿಲ್ಲರ್ ಪ್ರಕಾರವನ್ನು ಬರಿ ಮತ್ತೊಂದು ಪ್ರಕಾರ ಎಂದಷ್ಟೇ ನೋಡದೆ ಆ ಪ್ರಕಾರದ ಸಾಧ್ಯತೆಗಳನ್ನು ಗಂಭೀರವಾಗಿ ಅಭ್ಯಸಿಸಿ ಮಾಡಿರುವ ಕಿರುಚಿತ್ರ ಎನ್ನುವುದು ಇದನ್ನು ನೋಡಿದಾಗಲೇ ತಿಳಿಯುತ್ತದೆ.

ನೈಟ್‌ಶಿಫ್ಟ್‌ನಲ್ಲಿ ಸತತವಾಗಿ ಕೆಲಸ ಮಾಡುವ ವಿಶಾಖ ಎಂಬ ವ್ಯಕ್ತಿಯ ಬಯೊಲಾಜಿಕಲ್ ಕ್ಲಾಕ್ ಅಸ್ತವ್ಯಸ್ತವಾಗಿರುತ್ತದೆ. ಹಾಗಾಗಿ ಕನಸೋ ನನಸೋ ಎಂದು ಗೊತ್ತಾಗದ ಭ್ರಮಾಲೋಕವೊಂದರಲ್ಲಿ ಅವನು ಆಗಾಗ ಮುಳುಗಿಹೋಗಿರುತ್ತಾನೆ. ಆ ಲೋಕದಿಂದ ತಪ್ಪಿಸಿಕೊಳ್ಳಲು ಶತಪ್ರಯತ್ನ ಮಾಡಿರುತ್ತಾನೆ. ತನ್ನ ಗೊಂದಲಗಳಿಂದ ಹೊರಗೆ ಬರಲು ಸಹಾಯ ಮಾಡುವ ಮಾರ್ಗದರ್ಶಕ ಅವನಿಗೆ ಆ ಭ್ರಮಾಲೋಕದಲ್ಲಿಯೇ ಸಿಗುತ್ತಾನೆ. ಆದರೆ ಅವನ ಮಾರ್ಗದರ್ಶನದ ಹಾಗೆ ಮಾಡಲು ಹೋದಾಗೆಲ್ಲ ಸಣ್ಣ ತಪ್ಪುಗಳಿಂದಾಗ ಭ್ರಮಾಲೋಕದ ಸರಪಳಿಯಿಂದ ತಪ್ಪಿಸಿಕೊಳ್ಳದೆ ಒದ್ದಾಡುತ್ತಿರುತ್ತಾನೆ. ಇದು ಈ ಕಿರುಚಿತ್ರದ ಕಥನದ ಎಳೆ. ಬಯಾಲಾಜಿಕಲ್ ಕ್ಲಾಕ್ ಪರಿಕಲ್ಪನೆಯ ಇಟ್ಟುಕೊಂಡು ಆ ವ್ಯಕ್ತಿಯ ಭೂತ, ವರ್ತಮಾನ ಮತ್ತು ಭವಿಷ್ಯತ್ ಕಾಲಗಳೇ ಅದಲುಬದಲಾಗಿ ಅವನು ವರ್ತಮಾನದಲ್ಲಿ ಬದುಕಲೇ ಸಾಧ್ಯವಿಲ್ಲದೆ ಭೂತ ಮತ್ತು ಭವಿಷ್ಯತ್ ಕಾಲಗಳಲ್ಲಿ ತೊಳಲಾಡುವ ವಿಚಿತ್ರವನ್ನು ಇಲ್ಲಿ ಕಿರುಚಿತ್ರವಾಗಿ ಹೆಣೆಯಲಾಗಿದೆ.



**ಹೆಸರು:** ಆಪ್ಟಿಮಿಲೊ
**ನಿರ್ದೇಶನ:** ಆಕಾಶ್ ಕೋಟೆಮನೆ
**ಛಾಯಾಗ್ರಹಣ:** ಅರುಣ್ ಕುಮಾರ್ ಎಂ.
**ಸಂಗೀತ:** ಕ್ಲಾರೆನ್ಸ್ ಅಲೆನ್ ಕ್ರಾಸ್ತಾ
**ಸಂಕಲನ:** ವಿಶಾಖ
**ತಾರಾಗಣ:** ವಿಶಾಖ ಭಾರಾದ್ವಾಜ್, ವಿಶ್ವಾಸ್, ಶಶಿಕುಮಾರ್

ಇಡೀ ಕಥನ ರಾತ್ರಿಯೇ ನಡೆಯುವುದು ಈ ಸೈನ್ಸ್ ಫಿಕ್ಷನ್‌ಗೆ ಥ್ರಿಲ್ಲರ್ ಒಗ್ಗರಣೆಯನ್ನೂ ಸೇರಿಸುತ್ತದೆ. ಇಡೀ ಕಿರುಚಿತ್ರ ನಡೆಯುವುದು ಕಗ್ಗತ್ತಲ ರಾತ್ರಿಯಲ್ಲಿ. ಆ ರಾತ್ರಿಯ ಅನುಭವವನ್ನು ಅರೆಬೆಳಕಿನ ವಿನ್ಯಾಸವನ್ನು ಛಾಯಾಗ್ರಹಣ ದಟ್ಟವಾಗಿ ಕಟ್ಟಿಕೊಟ್ಟಿದೆ. ಹದವಾದ ಮತ್ತು ಪರಿಣಾಮಕಾರಿಯಾಗಿರುವ ಹಿನ್ನೆಲೆ ಸಂಗೀತವೂ ಈ ಚಿತ್ರದ ಶಕ್ತಿಗಳಲ್ಲೊಂದು.

ಇಷ್ಟೆಲ್ಲ ಇದ್ದೂ ಈ ಚಿತ್ರ ತಾಂತ್ರಿಕ ಗಟ್ಟಿತನದಿಂದ ಗಮನಸೆಳೆಯುತ್ತದೆಯೇ ಹೊರತು ಭಾವುಕವಾಗಿ ನಮ್ಮನ್ನು ತಟ್ಟುವುದಿಲ್ಲ. ನಿರೂಪಣೆಯಲ್ಲಿರುವ ಅನಗತ್ಯ ಕ್ಲಿಷ್ಟತೆಯೂ ಅದಕ್ಕೊಂದು ಕಾರಣ. ಸೈನ್ಸ್ ಥ್ರಿಲ್ಲರ್ ಅಂದರೆ ಅದು ಲಾಜಿಕ್‌ಗಳ ಅಚ್ಚುಕಟ್ಟಾದ ಹೊಂದಾಣಿಕೆಯಷ್ಟೆ ಎಂಬ ತಪ್ಪು ತಿಳಿವಳಿಕೆಯಲ್ಲಿ ಅದಕ್ಕಿರಬಹುದಾದ ಮಾನವೀಯ ಆಯಾಮವನ್ನು ನಿರ್ಲಕ್ಷಿಸಿರುವುದೇ ಇದಕ್ಕೆ ಕಾರಣ. ಇದು ಈ ಕಿರುಚಿತ್ರವಷ್ಟೇ ಅಲ್ಲ, ಈ ಜಾನರ್‌ನ ಹಲವು ಸಿನಿಮಾಗಳು ಅಪಯಶಸ್ಸಿನ ಹಿಂದಿರುವ ಸಮಸ್ಯೆ. ಕಥೆ ಯಾವುದೇ ಜಾನರ್‌ದಾಗಿರಲಿ, ಅದನ್ನು ಎಷ್ಟೇ ಹೊಸರೀತಿಯಲ್ಲಿ, ತಾಂತ್ರಿಕವಾಗಿ ಗಟ್ಟಿಯಾಗಿ ಹೇಳಲಿ, ಕೊನೆಗೂ ನಾವು ಸಿನಿಮಾ ಮಾಡುವುದು ಕಾನ್ಸೆಪ್ಟ್‌ಗಳ ಪರಿಚಯಕ್ಕಲ್ಲ, ಕಥೆ ಹೇಳಲಿಕ್ಕೆ ಎನ್ನುವುದನ್ನು ಮರೆಯಬಾರದು. ಆಗ ಇಂಥ ಸಿನಿಮಾಗಳಿಗೆ ಇರಬಹುದಾದ ಮನುಷ್ಯಬದುಕಿನ ಆಯಾಮವನ್ನೂ ಇದರೊಳಗೆ ಸೇರಿಸಲು ಸಾಧ್ಯವಾಗುತ್ತದೆ. ಇಲ್ಲವಾದರೆ ಕೊನೆಗೂ ಅದೊಂದು ಹೊಸ ಕಾನ್ಸೆಪ್ಟ್‌ನ ಪರಿಚಯವಾಗಿಯಷ್ಟೇ ಉಳಿದುಕೊಳ್ಳುತ್ತದೆ. ಕಾನ್ಸೆಪ್ಟುಗಳ ಪರಿಚಯಿಸಲು ಸಿನಿಮಾ ಮಾಡಬೇಕೆಂದೇನಿಲ್ಲವಲ್ಲ, ಪ್ರಬಂಧ ಬರೆದರೂ ಸಾಕು.

ಈ ಮಿತಿಯ ಹೊರತಾಗಿಯೂ ಈ ಕಿರುಚಿತ್ರವು, ನಿರ್ದೇಶಕರ ಮುಂದಿನ ಪ್ರಯತ್ನಗಳ ಕುರಿತು ಕಣ್ಣರಳಿಸಿ ನೋಡುವಂತೆ ಮಾಡುವುದಂತೂ ನಿಜ.

ಈ ಕಿರುಚಿತ್ರ ವೀಕ್ಷಣೆಗೆ bit.ly/3eQldcf ಕೊಂಡಿ/ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.